**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ.ತಳವಾರ್ ಸಾಬಣ್ಣ ಇವರ ನಿಯಮ 72 ರಡಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ಒದಗಿಸುವ ಬಗ್ಗೆ.**

**ವಿಷಯ:** ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಇಲ್ಲಿಯವರೆಗಿನ ಪ್ರಗತಿ, ಜನರ ಸಾಮಾಜಿಕ /ಆರ್ಥಿಕ ಜೀವನದ ಮೇಲೆ ಆಗಿರುವ ಪರಿಣಾಮ ಹಾಗೂ ಅನುದಾನದ ಬಳಕೆ ಕುರಿತು.

******

**ಉತ್ತರ:-**

2020-21ನೇ ಸಾಲಿಗೆ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ರೂ.300.00 ಕೋಟಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಕ್ರಿಯಾ ಯೋಜನೆಯಲ್ಲಿ ಕೃಷಿ, ಶಿಕ್ಷಣ, ಮಾನವ ಸಂಪನ್ಮೂಲ ಹಾಗೂ ಆರೋಗ್ಯ ಕಲೆ ಮತ್ತು ಸಾಹಿತ್ಯ ವಿಭಾಗದಡಿಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

2020-2021ನೇ ಸಾಲಿನ ಕ್ರಿಯಾ ಯೋಜನೆಯ ಅನುಷ್ಠಾನಕ್ಕಾಗಿ ರೂ.100.00 ಕೋಟಿ ಹಾಗೂ 2021-2022ನೇ ಸಾಲಿನಲ್ಲಿ ರೂ.100.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. 2022-23ನೇ ಸಾಲಿನಲ್ಲಿ ರೂ.100.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು,ಒಟ್ಟಾರೆ ರೂ.300 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ದಿನಾಂಕ:28.11.2023ರ ಅಂತ್ಯಕ್ಕೆ ರೂ. 287.07 ಕೋಟಿಗಳ ಅನುದಾನ ವೆಚ್ಚ ಭರಿಸಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘದ ಮೂಲಕ ಇಲ್ಲಿಯವರೆಗೆ ಜನರ ಸಾಮಾಜಿಕ / ಆರ್ಥಿಕ ಜೀವನದ ಮೇಲೆ ಆಗಿರುವ ಪರಿಣಾಮದ ವಿಭಾಗವಾರು ವಿವರ ಈ ಕೆಳಕಂಡಂತಿದೆ.

1. **<u>ಕೃಷಿ ವಿಭಾಗ ಯೋಜನೆಯಡಿಯಲ್ಲಿ</u>**

- ಆಯ್ಕೆಯಾದ ಅರ್ಹ ಫಲಾನುಭವಿಗಳಿಗೆ ದೇಸಿ ಹಸು, ಜೇನು, ಮೀನು ಸಾಕಾಣಿಕೆಗೆ ಪ್ರೋತ್ಸಾಹಿಸಲಾಗಿದೆ, ಸಾವಯವ ಕೃಷಿ, ಮತ್ತು ಸಮಗ್ರ ಕೃಷಿ ಯೋಜನೆ ವಿವಿಧ ಕೇಟಗೆರಿಯ ಘಟಕಗಳನ್ನು ನಿರ್ಮಾಣ ಮಾಡಲು ಪ್ರೋತ್ಸಾಹ ಧನ ನೀಡಲಾಗಿರುತ್ತದೆ.
- ವಿವಿಧ ಹಣ್ಣಿನ ಸಸಿ ವಿತರಣೆ ಹಾಗೂ ವಿವಿಧ ಬಿತ್ತನೆ ಬೀಜಗಳು ರೈತರಿಗೆ ವಿತರಿಸಲಾಗಿರುತ್ತದೆ.
- ರೈತರಿಗೆ ಸಾವಯವ ಕೃಷಿ, ಸಮಗ್ರ ಕೃಷಿ, ಗೋಕೃಪಾಮೃತ, ಸಣ್ಣರೈತರಿಗೆ ಕೃಷಿ ಉಪಕರಣಗಳ ಬಳಕೆ, ಮಧ್ಯಮ, ದೊಡ್ಡ ರೈತರಿಗೆ ಕೃಷಿ ಉಪಕರಣಗಳ ಬಳಕೆಯ ಕಾರ್ಯಾಗಾರ ಹಮ್ಮಿಕೊಳ್ಳಲಾಗಿರುತ್ತದೆ.

ಕಲ್ಯಾಣ ಕರ್ನಾಟಕ ವಿಭಾಗದ ಆಯ್ಕೆಯಾದ ರೈತರಿಗೆ ಆರ್ಥಿಕ ನೆರವು ಉಂಟಾಗಿರುತ್ತದೆ.

2. **ಶಿಕ್ಷಣ ವಿಭಾಗದಡಿಯಲ್ಲಿ**

- ಕಲ್ಯಾಣ ಕರ್ನಾಟಕ ವಿಭಾಗದ 1265 ಸರಕಾರ ಪ್ರಾಥಮಿಕ ಶಾಲೆಗಳಿಗೆ ಡಿಜಿಟಲ್ ಕ್ಲಾಸ್‌ರೂಮ್ ಅಳವಡಿಸಲಾಗಿರುತ್ತದೆ.
- ಕಲ್ಯಾಣಕರ್ನಾಟಕದ ವಿಭಾಗದ ಐಟಿಐ / ಡಿಪ್ಲೋಮಾ ಕಾಲೇಜುಗಳಿಗೆ ಡಿಜಿಟಲ್ ಕ್ಲಾಸ್‌ರೂಮ್ ಅಳವಡಿಸಲಾಗಿರುತ್ತದೆ.
- ಕಲ್ಯಾಣ ಕರ್ನಾಟಕದ ವಿಭಾಗದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಡಿಜಿಟಲ್ ಗ್ರಂಥಾಲಯ ಅಳವಡಿಸಲಾಗಿರುತ್ತದೆ.
- ಪ್ರೌಡ ಮತ್ತು ಪ್ರಾಥಮಿಕ ಸರಕಾರಿ ಶಾಲಾ ಶಿಕ್ಷಕರಿಗೆ ಸಂಸ್ಕಾರ ಭರಿತ ಪ್ರೇರಣಾ ತರಬೇತಿ ನೀಡಲಾಗಿರುತ್ತದೆ.
- ಕಲ್ಯಾಣ ಕರ್ನಾಟಕದ ವಿಭಾಗದ ವಿದ್ಯಾರ್ಥಿಗಳಿಗೆ ಕೆಎಎಸ್/ಐಎಎಸ್ ಮತ್ತು ಆರ್‌ಆರ್‌ಬಿ, ಬ್ಯಾಂಕಿಂಗ್ ಸಿ.ಗ್ರೂಪ ವಿವಿಧ ಸ್ಪರ್ಧಾತ್ಮಕ ಪರೀಕ್ಷೆ ಬುನಾದಿ ತರಬೇತಿ ನೀಡಲಾಗಿರುತ್ತದೆ.
- ಕಲ್ಯಾಣ ಕರ್ನಾಟಕದ ವಿಭಾಗದ ಯುವಕ/ಯುವತಿಯರಿಗೆ 3 ತಿಂಗಳ ಸೈನಿಕ ಮತ್ತುಅರೆ ಸೈನಿಕ ತರಬೇತಿ ನೀಡಲಾಗಿರುತ್ತದೆ.
- ಕಲ್ಯಾಣ ಕರ್ನಾಟಕದ ವಿಭಾಗದ 196 ಗ್ರಾಮ ಪಂಚಾಯತಗಳಲ್ಲಿ ಡಿಜಿಟಲ್ ಗ್ರಂಥಾಲಯ ಅಳವಡಿಸಲಾಗಿರುತ್ತದೆ.
- ಸರಕಾರಿ ಶಾಲೆಗಳಿಗೆ ಬ್ಯಾಂಡ ಕಿಟ್ ವಿತರಿಸಲಾಗಿರುತ್ತದೆ ಮತ್ತು ಸ್ಪೋರ್ಟ್ಸ್ ಮತ್ತು ಗೈಡ್ಸ್ಕಾಯ್‌ರ್ಗಾರ ಏರ್ಪಡಿಸಿ ಸಮವಸ್ತ್ರ ವಿತರಿಸಲಾಗಿರುತ್ತದೆ.

ಶಿಕ್ಷಣ ವಿಭಾಗದಡಿಯಲ್ಲಿ ಡಿಜಿಟಲ್ ಕ್ಲಾಸ್‌ರೂಮ ಅಳವಡಿಸಿದ ಶಾಲೆಗಳ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಅನುಕೂಲವಾಗಿರುತ್ತದೆ, ಡಿಜಿಟಲ್ ಗ್ರಂಥಾಲಯದಿಂದ ಗ್ರಾಮದ ಮಕ್ಕಳಿಗೆ ವಿದ್ಯಾಬ್ಯಾಸಕ್ಕೆ ಅನುಕೂಲವಾಗುತ್ತಿದೆ.

3. **ಮಾನವ ಸಂಪನ್ಮೂಲ ಅಭಿವೃದ್ಧಿ ವಿಭಾಗ**

- ಬೇಕರಿ ಉತ್ಪನ್ನ ತಯಾರಿಕೆ ಮತ್ತು ವಿವಿಧ ಯಂತ್ರೋಪಕರಣಗಳು ಅರ್ಹ ಆಯ್ಕೆಯಾದ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ.
- ಲಘು ಮತ್ತು ಭಾರಿ ಮೋಟರ ವಾಹನ ತರಬೇತಿ, ವಿವಿಧ ಮಸಾಲಾ ತಯಾರಿಕೆತರಬೇತಿ, ವಿವಿಧ ಕಿರುಉದ್ಯಮ ತಯಾರಿಕೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿರುತ್ತದೆ.

ಯಂತ್ರೋಪಕರಣಗಳು ಪಡೆದ ಫಲಾನುಭವಿಗಳ ಆರ್ಥಿಕವಾಗಿ ಸಬಲರಾಗಿರುತ್ತಾರೆ ಹಾಗೂ ಲಘು ಮತ್ತು ಭಾರಿ ವಾಹನ ತರಬೇತಿರಿಂದ ಆರ್ಥಿಕ ನೆರವು ಉಂಟಾಗಿರುತ್ತದೆ.

4. **ಕಲೆ ಮತ್ತು ಸಾಹಿತ್ಯ ಅಭಿವೃದ್ಧಿ ವಿಭಾಗ**

- ಯೋಗ ಶಿಕ್ಷಕರಿಗೆ ಬಲವರ್ಧನೆ, ಆಪ್ತ ಸಮಾಲೋಚನೆ, ಪ್ರಾಥಮಿಕ ಆರೋಗ್ಯ, ಆಯುರ್ವೇದ ಹಾಗೂ ನಾಟಿ ವೈದ್ಯರ, ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ, ಮನೆ ಮದ್ದು, ಗೃಹಣಿಯರಿಗೆ 20 ಔಷಧಿಯಗಿಡ ಮನೆ ಅಂಗಳದಲ್ಲಿ ಬೆಳೆಸುವ ಮಾಹಿತಿ, ದೃಷ್ಟಿ ಬದಲಾದರೆ ಸೃಷ್ಠಿ ಬದಲಾಯಿತು, ಜಾನಪದ ಸಾಹಿತ್ಯಗಾರರ ಬೆಳೆಸುವುದು, ಚಿತ್ರ ಕಲೆ ಸ್ಪರ್ಧೆ, ಗಮಕ ಕಲೆ, ಹಳೆಗನ್ನಡ ವಾಚನ ಶಿಬಿರ, ಸ್ವಾವಲಂಬಿ ಗ್ರಾಮದ ಪ್ರಶಿಕ್ಷಕರ ತರಬೇತಿ ಕಾರ್ಯಾಗಾರಗಳನ್ನು ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಏರ್ಪಡಿಸಲಾಗಿರುತ್ತದೆ.
- ಪ್ರಗತಿ ಕೇಂದ್ರಗಳಿಂದ ಕಲ್ಯಾಣ ಕರ್ನಾಟಕ ವಿಭಾಗದ ಹಳ್ಳಿಗಳಲ್ಲಿ ವಾಸಿಸುತ್ತಿರುವ ಸುಮಾರು 1 ಲಕ್ಷ ಮಕ್ಕಳು ಪ್ರಯೋಜನೆ ಪಡೆದಿರುತ್ತಾರೆ.

- ಕೌಶಲ್ಯ ಕೇಂದ್ರದಿಂದ ಹೊಲಿಗೆ ತರಬೇತಿಯ ಸುಮಾರು 1.25 ಲಕ್ಷ ಮಹಿಳೆಯರು ಪಡೆದಿರುತ್ತಾರೆ. ಅವರಿಗೆ ಪ್ರಮಾಣ ಪತ್ರ ಸಹ ನೀಡಿರುತ್ತಾರೆ.
- ಕಲ್ಯಾಣ ಕರ್ನಾಟಕ ವಿಭಾಗದಲ್ಲಿ 61 ಸಾಂಸ್ಕೃತಿಕ ಭವನಗಳನ್ನು ನಿರ್ಮಾಣ ಮಾಡಲಾಗಿದ್ದು ಸದರಿ ಭವನಗಳಿಂದ ಜನ ಸಾಮಾನ್ಯರು ಪ್ರಯೋಜನೆ ಪಡೆಯುತ್ತಿದ್ದಾರೆ.

ಸಂಖ್ಯೆ: ಪಿಡಿಎಸ್ 205 ಹೆಚ್‌ಕೆಡಿ 2023

**(ಡಿ.ಸುಧಾಕರ್)**
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಸಚಿವರು.